ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,
ಕುಂದಾಪುರ

ಒ.ಎಸ್.ನಂಬ್ರಃ 390/2018
ಡಿ.ಡಬ್ಲ್ಯೂ : 1

ದಿನಾಂಕಃ 19-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ವಾದಿ ಪರ ಶ್ರೀ ಟಿ.ಬಿ. ಎಸ್. ವಕೀಲರಿಂದಃ

1. ಕಾಳ ಹಾಂಡ, ಗಿರಿಜ, ಸರೋಜರವರು ದಾವಾ ಸ್ವತ್ತುಗಳಲ್ಲಿ ನಮಗೆ ಪಾಲು ಬೇಕು ಎಂದು ಅಸಲು ದಾವೆ ಸಂಖ್ಯೆ 65/2002 ರಂತೆ ಅಸಲು ದಾವೆ ಸಲ್ಲಿಸಿದ್ದರು. ಅದು ವಜಾ ಆಗಿರುತ್ತದೆ. ನಾನು ಆ ಪ್ರಕರಣದಲ್ಲಿ ನ್ಯಾಯಲಯದಲ್ಲಿ ಹಾಜರಾಗಿ ಲಿಖಿತ ತಕರಾರು ಸಲ್ಲಿಸಿರುತ್ತೇನೆ. ನಾನು ಆ ಪ್ರಕರಣದಲ್ಲಿ ಸಾಕ್ಷ್ಯ ವಿಚಾರಣೆ ಕೊಟ್ಟಿರುತ್ತೇನೆ. ಲಿಂಗ ಹಾಂಡ, ಕುಷ್ಟ ಹಾಂಡರವರು ಆ ಪ್ರಕರಣದಲ್ಲಿ ಯಾವುದೇ ಲಿಖಿತ ತಕರಾರು ಸಲ್ಲಿಸಿರುವುದಿಲ್ಲ ಹಾಗೂ ಸಾಕ್ಷ್ಯವಿಚಾರಣೆ ಮಾಡಿಸಿರುವುದಿಲ್ಲ.

2. ವಿಲ್ ನ್ನು ನನ್ನ ತಾಯಿ ಮೃತರಾಗುವ 6 ತಿಂಗಳ ಪೂರ್ವದಲ್ಲಿ ಮಾಡಿರುತ್ತಾರೆ. ನನ್ನ ತಾಯಿ ದಿನಾಂಕ 05-10-2000 ರಂದು ಮೃತ ಪಟ್ಟಿರುತ್ತಾರೆ. ಕುಷ್ಟ ಹಾಂಡ ಎಂದರೆ ನನ್ನ ಅಣ್ಣ. ಅವರು ಪೊಲೀಸ್ ಇಲಾಖೆಯಲ್ಲಿ ಇದ್ದರು. ಅವರು 2000 ನೇ ಇಸವಿಯಲ್ಲಿ ಉಡುಪಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ನನ್ನ ತಾಯಿಗೆ ಸೌಖ್ಯ ಇಲ್ಲ ಎಂದು ಉಡುಪಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿರುತ್ತಾರೆ ಎಂದರೆ ಸರಿ. ನನ್ನ ತಾಯಿಗೆ ಸ್ವಲ್ಪ ಹುಷಾರಿರಲಿಲ್ಲ. ಅವರು ಒಂದು ದಿನ ಆಸ್ಪತ್ರೆಗೆ ಹೋಗಿದ್ದು ಆ ನಂತರ ನಮ್ಮ ಮನೆಗೆ ಬಂದಿರುತ್ತಾರೆ.

3. ನನ್ನ ತಾಯಿ ಸಾಯುವ 1 ವರ್ಷದ ಪೂರ್ವದಲ್ಲಿ ಕುಷ್ಟ ಹಾಂಡರವರ ಮನೆಯಲ್ಲಿ ವಾಸ ಇದ್ದು ಅವರ ಚಿಕಿತ್ಸೆಯನ್ನು ಹಾಗೂ ಸೌಖ್ಯವನ್ನು ಅವರೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ವಿಲ್ ನ್ನು ಉಪನೋಂದಾಣಾಧಿಕಾರಿಯವರ ಕಚೇರಿಗೆ ಹೋಗಿ ಮಾಡಿಸಲಾಗಿರುತ್ತದೆ. ನನ್ನ ತಾಯಿ ಉಪನೋಂದಾಣಾಧಿಕಾರಿಯವರ ಕಚೇರಿಗೆ ಹೋದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ವಿಲ್ ಮಾಡಿದ ದಿನಾಂಕ 15-04-2000.

ಉಪನೋಂದಾಣಾಧಿಕಾರಿಯವರ ಕಚೇರಿಗೆ ಯಾರು ಕರೆದುಕೊಂಡು ಹೋಗಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ.

4. ನನಗೆ ಅವರು ವಿಲ್ ಮಾಡುವಾಗ ವಿಲ್ ಮಾಡುವ ವಿಚಾರ ನನಗೆ ಗೊತ್ತಿರಲಿಲ್ಲ. ಅವರು ಈ ವಿಚಾರವನ್ನು ನನ್ನ ಬಳಿ ಹೇಳಿರುವುದಿಲ್ಲ. ನನಗೆ RTC ಯನ್ನು ಬದಲಾಯಿಸುವಾಗ ಮುಟೇಶನ್ ಅಧಿಕಾರಿಗಳು ವಿಲ್ ಮಾಡಿದ ಬಗ್ಗೆ ತಿಳಿಸಿರುತ್ತಾರೆ. ವಿಲ್ ಅವರ ಕಚೇರಿಯಲ್ಲಿ ಇದ್ದಿರಬಹುದು. ನಾನು ವಿಲ್ ನ್ನು ನೋಡಿದ್ದು ಮುಟೇಶನ್ ಆಗುವಾಗ, ಅದಕ್ಕೂ ಪೂರ್ವದಲ್ಲಿ ನೋಡಿರುವುದಿಲ್ಲ. ಅದು ಈಗ 15 ವರ್ಷಗಳ ಹಿಂದೆ ಆಗಿದ್ದಿರಬಹುದು ಎಂದು ನುಡಿಯುತ್ತಾರೆ. ನಾನು ಆ ವಿಲ್ ನ್ಯಾಯಲಯಕ್ಕೆ ಹಾಜರು ಪಡಿಸಿರುತ್ತೇನೆ. 2001 ಮತ್ತು 2002 ರಂದು 2 ಬಾರಿ ನ್ಯಾಯಯಕ್ಕೆ ಹಾಜರು ಪಡಿಸಿರುತ್ತೇನೆ. ಆ ವಿಲ್ ಗೆ ಸಾಕ್ಷಿ ಚಿಕ್ಕಮ್ಮ ಶೆಡ್ತಿ ಹಾಗೂ ಅನಂತ ನಾಯಕ್‌ರವರು ಇರುತ್ತಾರೆ. ಅವರು ಬದುಕಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಅದರಲ್ಲಿ ವಿಳಾಸ ಇರುವುದು ನಾಗಭೂಷಣ ಭಟ್‌ರವರು ಬರೆದಂತೆ ಕಾಣಿಸುತ್ತದೆ. ಅವರು ಕಮಲಶಿಲೆಯವರು ಎಂದು ನುಡಿಯುತ್ತಾರೆ. ನಾನು ಅವರನ್ನು ನೋಡಿರುತ್ತೇನೆ. ಆದರೆ ಅವರ ಪರಿಚಯ ಇರುವುದಿಲ್ಲ. ನಾನು ಅಪರೂಪಕ್ಕೆ ಅವರ ಮನೆಗೆ ಹೋಗಿರುತ್ತೇನೆ.

5. ನಾಗಭೂಷಣ ಭಟ್ ರವರು ಈಗ ಜೀವಂತ ಇರುತ್ತಾರೆ. ಹಿಂದಿನ ಪ್ರಕರಣಗಳಲ್ಲಿ ಸದರಿ ವಿಲ್ ನಾಮೆಯ ಸಾಕ್ಷಿದಾರರರು ಹಾಗೂ ಬರೆದವರನ್ನು ನ್ಯಾಯಲಯದ ಮುಂದೆ ಸಾಕ್ಷಿ ಕೊಟ್ಟಿರುತ್ತಾರಾ ಎಂದರೆ ಸಾಕ್ಷಿ ವಿಲ್ ಗೆ ಸಾಕ್ಷಿ ಕೊಟ್ಟಿರುವುದಿಲ್ಲ, ನನಗೆ ಅವರ ಪರಿಚಯ ಇರುವುದಿಲ್ಲ ಎಂದು ನುಡಿಯುತ್ತಾರೆ. ವಿಲ್ ಸುಳ್ಳು ಎಂದು ಲಿಂಗ ಹಾಂಡರವರು ದಾವೆ ಸಲ್ಲಿಸಿದ ಮೇಲೆ ತಾವು ಹೋಗಿ ವಿಲ್ ನ ಸಾಕ್ಷಿದಾರರು ಹಾಗೂ ಬರವಣಿಗೆದಾರರನ್ನು ವಿಚಾರ ಮಾಡಿದ್ದೀರಾ ಎಂದರೆ ಸಾಕ್ಷಿ ನಾನು ಯಾರನ್ನು ಕೇಳಿರುವುದಿಲ್ಲ ಎಂದು ನುಡಿಯುತ್ತಾರೆ.

6. ನನ್ನ ತಾಯಿ ಯಾವುದೇ ವಿಲ್ ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ 15-04-2000 ರಲ್ಲಿ ವಿಲ್ ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ಅವರು ವಿಲ್ ಬರೆದಿದ್ದು ಇಲ್ಲ, ಉಪನೋಂದಾಣಾಧಿಕಾರಿಯವರ ಕಚೇರಿಗೆ ಹೋಗಿಲ್ಲ ಎಂದರೆ ಸಾಕ್ಷಿ ಎಲ್ಲವನ್ನು ಹಾಜರು ಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಅಣ್ಣಂದಿರಿಗೆ ಮೋಸ ಮಾಡುವ ಉದ್ದೇಶದಿಂದ ಒಂದು ಸುಳ್ಳು ವಿಲ್ ನಾಮೆಯನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. OS 65/2002 ರಲ್ಲಿ ನಾನು ನನ್ನ ಅಣ್ಣಂದಿರಿಗೆ ನಂಬಿಕೆ ದ್ರೋಹ

ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆದ್ದರಿಂದ ದಾವಾ ಭೂಮಿಯಲ್ಲಿ ದಾವೆಯಲ್ಲಿ ಕೇಳಿದಂತೆ ಭೂಮಿಗಳು ವಿಭಾಗಕ್ಕೆ ಲಭ್ಯ ಇರುತ್ತದೆ ಎಂದರೆ ಸಾಕ್ಷಿ ನನ್ನ ತಾಯಿಗೆ ನನಗೆ ವಿಲ್ ನಾಮೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

ಮರು ವಿಚಾರಣೆ - ಇಲ್ಲ.

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ